ಕೆಲಸ ಇದೆ, ನೀವೇ ಹೋಗಿ. ಹಾಗೇನಾದ್ರೂ ಹೈದರಾಬಾದ್‌ಗೆ ಹೋಗೋದಾದ್ರೆ ನನ್ನ ತಮ್ಮ ಗಂಗಿರೆಡ್ಡಿನ ಜೊತೆಗೆ ಕರ್ಕೊಂಡೋಗಿ' ಎಂದು ಸೂಚಿಸಿದ. ನಾನು ಮೆಜೆಸ್ಟಿಕ್‌ಗೆ ಬಂದು ಬಾಗೇಪಲ್ಲಿ ಬಸ್ ಹತ್ತಿದೆ. ಪ್ರಯಾಣದುದ್ದಕ್ಕೂ ಶೇಷು ಲಕ್ಷಗಳಲ್ಲಿ ವ್ಯವಹಾರ ಎಂದಿದ್ದಾನೆ... ಎಷ್ಟು ಲಕ್ಷ ಕೊಡಬಹುದು? ಅದರಲ್ಲಿ ನನಗೆಷ್ಟು ಸಿಗಬಹುದು? ಕಿತ್ತು ತಿನ್ನುತ್ತಿರುವ ನನ್ನ ಮೂಲಭೂತ ಅಗತ್ಯಗಳನ್ನು ನಿವಾರಿಸಿಕೊಳ್ಳಬೇಕು, ಮುಂದಿನ ವರ್ಷದ ಮಕ್ಕಳ ಫೀಸ್‌ಗೆ ಇದರಲ್ಲೇ ಒಂದಷ್ಟು ತೆಗೆದಿಡಬೇಕು, ಅದಾದ ನಂತರ ಉಳಿದ ದುಡ್ಡಲ್ಲಿ ಒಂದು ಸೆಕೆಂಡ್ ಹ್ಯಾಂಡ್ ಕಾರ್ ಕೊಳ್ಳಲು ಟ್ರೈ ಮಾಡಬೇಕು... ಹೀಗೆ ಸಾಗುತ್ತಿತ್ತು ನನ್ನ ಯೋಚನಾ ಲಹರಿ. ಕೆಳಮಧ್ಯಮವರ್ಗದವರ ಯೋಚನೆಗಳು ಇದಕ್ಕಿಂತ ಭಿನ್ನವಾಗಿರಲು ಸಾಧ್ಯವಿರಲಿಲ್ಲ. ಕೋಟಿಗಳು ಬರುವ ಕನಸು ನುಚ್ಚು ನೂರಾಗುತ್ತಿದ್ದಂತೆ ಲಕ್ಷಗಳು ಬಂದರೂ ಸರಿಯೇ ಅದರಲ್ಲಿ ಏನು ಮಾಡಬಹುದು ಎಂದು ಯೋಚಿಸುತ್ತದೆ ಎಲ್ಲದಕ್ಕೂ ರಾಜಿಯಾಗುವ ಮನಸ್ಸು. ನೂರು ಕಿಲೋಮೀಟರ್ ಪ್ರಯಾಣದುದ್ದಕ್ಕೂ ಏನು ಬೇಕು ಏನು ಬೇಡ, ಅವುಗಳನ್ನು ಪಡೆದಾಗ ಆಗುವ ಸಂತಸ ಹೀಗೆ ಇಂತವೇ ಪುಳಕಗಳು. ದಾರಿ ಸವೆದದ್ದೇ ಗೊತ್ತಾಗಲಿಲ್ಲ. ಬಾಗೇಪಲ್ಲಿಯಲ್ಲಿ ಇಳಿದು ತಲೆಗೆ ಇಪ್ಪತ್ತು ರೂಪಾಯಿ ಎಂದು ಕೂಗುತ್ತಿದ್ದ, ಅದಾಗಲೇ ಹತ್ತು ಜನ ಕೂತಿದ್ದ ಆಟೊ ಒಂದರಲ್ಲಿ ನಾನೂ ಪ್ರಯಾಸದಿಂದ ತೂರಿಕೊಂಡೆ. ನನ್ನ ಅದೃಷ್ಟ ದೇವತೆ ಡಬಲ್ ಎಂಜಿನ್ ಹಾವಿದ್ದ ಹಳ್ಳಿಗೆ ಕಾಲಿರಿಸಿದೆ.

ಇದಕ್ಕೆ ಮುಂಚೆ ಒಂದೆರಡು ಸಲ ಆ ಊರಿಗೆ ಬಂದಿದ್ದರೂ ನನಗೆ ಆ ಹಳ್ಳಿಯ ಅವ್ಯವಸ್ಥೆಗಳೇ ಕಣ್ಣಿಗೆ ರಾಚುತ್ತಿದ್ದವು. ಇಲ್ಲಿ ಹೇಗಪ್ಪ ಸಮಯ ಕಳೆಯೋದು ಎಂಬ ಚಿಂತೆಯಲ್ಲಿಯೇ ಆ ಹಳ್ಳಿಗೆ ಬಂದಮೇಲೆ ಹೋಗುವ ತನಕವೂ ಚಡಪಡಿಸುತ್ತಿದ್ದೆ. ಈ ದಿನ ಆ ಊರು ನನ್ನ ಪಾಲಿಗೆ ಅದೃಷ್ಟದ ಬಾಗಿಲು ತೆರೆಯುವ ಭಾಗ್ಯನಗರಿಯಂತೆ ಭಾಸವಾಯಿತು. ಸೀದಾ ಹಾವಿದ್ದ ಸ್ಥಳಕ್ಕೆ ಹೋಗಬೇಕೆನಿಸಿದರೂ ಹಾಗೇ ಹೋಗುವುದರಿಂದ ಈ ಹಳ್ಳಿಗರ ಮನಸ್ಸಿನಲ್ಲಿ ಅನುಮಾನ ಮೂಡುವುದಕ್ಕೆ ನಾನೇ ಕಾರಣನಾಗುತ್ತೇನೆ ಎಂಬ ಆತಂಕದಿಂದ ನೇರ ಭಾವನ ಮನೆಗೆ ಹೋದೆ. ಗಂಗಿರೆಡ್ಡಿ ಅಲ್ಲಿಯೇ ಇದ್ದ. ಅಲ್ಲಿ ಅವನು ಅದೆಷ್ಟು ನೆಮ್ಮದಿಯಿಂದ ಹರಟೆ ಹೊಡೆಯುತ್ತಿದ್ದಾನೆಂದರೆ... ಅದನ್ನು ಕಂಡು ನನ್ನ ತಲೆಕೆಡಲು ಶುರುವಾಯಿತು. 'ಈ ಮಂಕುದಿಣ್ಣೆಗೆ ಏನಂದ್ರೆ ಏನೂ ಯೋಚನೆ ಇಲ್ವಲ್ಲ... ನಿಧೀನ ಕಾಯೋದು ಬಿಟ್ಟು ಇಲ್ಲಿ ಹೀಗೆ ಕೂತಿದಾನಲ್ಲ' ಎಂದು ಅನಿಸಿತು.

ಮನೆಯವರನ್ನು ಮಾತಾಡಿಸಿ, ಕಾಫಿ ಕುಡಿದು ಗಂಗಿರೆಡ್ಡಿಗೆ ಸನ್ನೆ ಮಾಡಿ, ಅವನು ಹೊರಡುತ್ತಿದ್ದಂತೆ ನಾನು ಮನೆಯವರಿಗೆ, ''ಗಂಗಿರೆಡ್ಡಿ ಜೊತೆ ನಾನೂ ಹಾಗೇ ಅಡ್ಡಾಡಿಕೊಂಡು ಬರ್ತೀನಿ'' ಎಂದು ಹೇಳಿ ಅಲ್ಲಿಂದ ಹೊರಬಿದ್ದೆ. ದಾರಿಯುದ್ದಕ್ಕೂ ಹಾವಿನ ಬಗ್ಗೆ ಅವನಲ್ಲಿ ವಿಚಾರಿಸುತ್ತಿದ್ದೆ. ''ನೀನು ಹೊಲದಲ್ಲಿರೋದು ಬಿಟ್ಟು ಇಲ್ಯಾಕೆ ಬಂದೆ? ಮನೇಗೆ ಹೋಗಿ ನಾನೇ ಬರತಿದ್ದೆ'' ಎಂದು ಅಸಮಾಧಾನವನ್ನು ಸಣ್ಣಗೆ ಹೊರಹಾಕಿದೆ. ಗಂಗಿರೆಡ್ಡಿ, ''ನೀವೇನು ಯೋಚನೆ ಮಾಡಬೇಡಿ, ಪಕಡ್‌ಬಂದಿಯಾಗಿ ಇಟ್ಟಿದೀನಿ. ಯಾರಿಗೂ ಅನುಮಾನ ಬರದ ಹಾಗೆ'' ಎಂದು ಧೈರ್ಯ ಹೇಳಿದ.

ಅದುವರೆಗೂ ಎರಡು ತಲೆ ಹಾವನ್ನು ಅದರ ಅಕ್ರಮ ಮಾರಾಟಗಾರರೊಂದಿಗೆ ಪತ್ರಿಕೆಗಳಲ್ಲಿ ಅಚ್ಚಾಗಿರುವ ಫೋಟೊಗಳಲ್ಲಿ ಕಂಡಿದ್ದೆ. ಅದು ನೋಡಲು ಹೇಗಿರಬಹುದು? ಆ ಹಾವಿನ ಸ್ವಭಾವ ಹೇಗೆ? ಶೇಷು ಹೇಳಿದ ಹಾಗೆ ಕೇವಲ ಮಣ್ಣನ್ನೇ ತಿಂದು ಅದು